VI SRI K. J. GEORGE (Minister of State for Transport) to lay:—

1. Notification No. FTD 77 TMT 89 dated 29-12-1989

Regarding of taxation of Goods Vehicles registered in Meharashtra playing on Inter-State route between Karnataka and Maharastra a tax of Rupees Five hundred per annum shall be levied irrespective of the Laden weight on every goods vehicle.

2 Notification No. FTD 16 TMT 90 dated 13-2-1990

Exemption from payment of Motor Vehicles Tax in respect of Thirty Vehicles belonging to the Anna Transport Corporation, Salem.

3 Notification No. FTD 87 TMT 90 dated 5-4-1990

Exemption from payment of Motor Vehicle Tax for Ten Vehicles belonging to Jeeva Transport Corporation Ltd., Brode, Tamil Nadu.

4 Notification No FTD 322 TMT 89 dated 31-3-1990

Exemption from payment of Motor Vehicle Tax for Two Jeeps used by Officials of Red Cross Society, Bangalore.

as required under Section 16(2) of the Karnataka Motor Vehicales Taxation Act, 1957.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮಂಡಿಸಲಾಯಿತು.

೩. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಶನಾರ್ಥ ಒಪ್ಪಿಗೆ ಪಡೆದ ವಿನಿಯಮಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಅನುಮತಿಯನ್ನು ಕೋರಿ ಒಂದು ಮಹತ್ವದ ವಿಚಾರವನ್ನು ಪ್ರಸ್ತುತ ಪಡಿಸಿಕ್ಕೆ ಬಯಸುತ್ತೇನೆ. ನಿನ್ನೆಯ ಪತ್ರಿಕೆಗಳಲ್ಲಿ ' ಮರ್ಗಾವಣೆ ಶಾಸಕರ ಆಕ್ರೋಶ ' ಎನ್ನುವಂಥ ವಿಚಾರದಲ್ಲಿ ಒಂದು ವಿಚಾರ ಪ್ರಸ್ತಾಪವಾಗಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಅನುಮತಿ ಕೊಟ್ಟಿದ್ದೀರಾ ಅಥವಾ ಇಲ್ಲವೇ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರು ನನಗೆ ಪರ್ಮಿಷನ್ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆಯೆಂದರೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲವು ಮಾತೃಕ್ಕಂಥ ಅಧಿಕಾರಿಗಳು ಬೀದರ್‌ನಿಂದ ಹಿಡಿದು ಕೊಡಗಿನವರೆಗೆ ರಾಜ್ಯದ ಎಲ್ಲಾ ೨೦ ಜಿಲ್ಲೆಗಳಿಂದ ಕಳೆದ ೧೦-೧೫ ದಿನಗಳಿಂದ ಬೆಂಗಳೂರಿಗೆ ಬಂದು ಮಾಸ್ತರ ಹೂತಿದ್ದಾರೆ. ಇವರಿಂದ ಸರ್ಕಾರಿ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ.

ವರ್ಗಾವಣೆಯಲ್ಲಿ ಅನ್ಯಾಯವಾಗಿದೆ ಎಂದು ಮಾನ್ಯ ಶಾಸಕರು ಹೇಳಿದ್ದಾರೆ. ಇವರ ಬಗ್ಗೆ ಹೇಳಲು...

ಅಧ್ಯಕ್ಷರು.—ಮಾನ್ಯ ಸಿಂಧ್ಯಾರವರೆ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮುಖ್ಯಮಂತ್ರಿಗಳು ಇದ್ದಾರೆ, ಅವರ ಗಮನಕ್ಕೆ ತರಬೇಕಾಗಿದೆ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆಡಳಿತ ಪಕ್ಷದ ಸದಸ್ಯರುಗಳು ಗಂಭೀರ ಸ್ವರೂಪದ ಆಪಾದನೆಗಳನ್ನು ಮಾಡಿದ್ದಾರೆ, ಪತ್ರಿಕೆಗಳಲ್ಲಿ ಕೂಡ ಬಂದಿಯಾಗಿದೆ ೨೫,೦೦೦ ರೂಪಾಯಿಗಳನ್ನು ಕೊಟ್ಟು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆಯಂತೆ.

(ಗೊಂದಲ)

ಅಧ್ಯಕ್ಷರು.—ತಾವು ನನಗೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ವರ್ಗಾವಣೆಯಲ್ಲಿ ೨೫,೦೦೦ ರೂಪಾಯಿವರೆಗೂ ವ್ಯವಹಾರ ನಡೆದಿದೆ. ಕಾಂಗ್ರೆಸ್ ಪಕ್ಷದಲ್ಲಿಯೇ ದೊಡ್ಡ ಗೊಂದಲವಾಗಿದೆ.

(ಗೊಂದಲ)

ಅಧ್ಯಕ್ಷರು.—ನಾನು ಮಾನ್ಯ ಸಿಂಧ್ಯರವರಿಂದ ಇದನ್ನು ನಿರೀಕ್ಷಣೆ ಮಾಡಿರಲಿಲ್ಲ. ಇಂಥ ವಿಚಾರಗಳನ್ನು ಸಭೆಯ ಮುಂದೆ ಪ್ರಸ್ತಾಪ ಮಾಡುವ ಮುನ್ನ ನನಗೆ ಒಂದು ನೋಟೀಸ್ ಕೊಡಬಹುದಾಗಿತ್ತು. ನಾನು೧೦-೩೦ಕ್ಕೆ ಕಛೇರಿಗೆ ಬರುತ್ತೇನೆ. ನನ್ನ ಕಿವಿ ಮೇಲೆ ಇಂಥ ವಿಚಾರ ಪ್ರಸ್ತಾಪ ಮಾಡುತ್ತೇನೆಂದು ಹೇಳಿದರೆ, ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕೂಡ ಇಂಥ ವಿಚಾರ ಪ್ರಸ್ತಾಪಕ್ಕೆ ಬರಬಹುದು ಎಂದು ತಿಳಿಸಬಹುದು. ಇಷ್ಟರ್ತು ತಾವು ನನ್ನನ್ನು ಭೇಟಿ ಮಾಡಿದ್ದಿರಿ, ಆದರೆ ಇಂಥ ವಿಚಾರ ಪ್ರಸ್ತಾಪ ಮಾಡುತ್ತೇನೆಂದು ತಿಳಿಸಲಿಲ್ಲ. ನನಗೆ ಖಾತರಿ ಇದೆ, ಏನೆಂದರೆ ತಾವು ಪ್ರಸ್ತಾಪ ಮಾಡತಕ್ಕ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ತಮಗೂ ಒಪ್ಪಿಗೆ ಇಲ್ಲವೆಂದು.

ಶ್ರೀ ಪಿ. ಜಿ. ಆರ್, ಸಿಂಧ್ಯ.—ನನ್ನ ಒಪ್ಪಿಗೆ ಇದೆ. ತಮ್ಮನ್ನು ಭೇಟಿಯಾದ ಸಂದರ್ಭದಲ್ಲಿ ನಾನು ಪ್ರಜಾವಾಣಿ ಪತ್ರಿಕೆ ಓದಿರಲಿಲ್ಲ. ಮುಖ್ಯಮಂತ್ರಿಗಳು ಈಗ ಸದನದಲ್ಲಿ ಇದ್ದಾರೆ,

MR SPEAKER.—I will not allow.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇನ್ನೇ ತಾರೀಖಿನಿಂದ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೂ ಸಹ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಇಡೀ ರಾಜ್ಯದ ಗಮನವನ್ನು ಸೆಳೆದಿರುವಂತಹ ವಿಚಾರವೆಂದರೆ ವರ್ಗಾವಣೆ ವಿಚಾರ.

MR SPEARER.—I am not allowing the Cheif Minister to make a statement.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮನವಿ ಸಲ್ಲಿಸುತ್ತಿದ್ದೇವೆ.

ಅಧ್ಯಕ್ಷರು.—ಬರೆದುಕೊಡಿ, ಅದನ್ನು ಯಾವ ರೀತಿಯಲ್ಲಿ ಸದನದ ಮುಂದೆ ಇಡಬೇಕೆಂದು ತೀರ್ಮಾನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಪತ್ರಿಕೆಗಳಲ್ಲಿ ಬಂದಿರುವ ವಿಚಾರ, ತಮ್ಮ ಗಮನಕ್ಕೂ ಬಂದಿದೆ. ಸರ್ಕಾರದ ಪರವಿಯಿಂದ ಉತ್ತರ ಕೊಡಿಸಿ. ಇಷ್ಟರ್ತು ಬೆಳಿಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಭಾರೀ ಗೊಂದಲವಾಗಿದೆಯಂತೆ.

ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿ ೯೦–೯೧ನೇ ಸಾಲಿಗೆ ಉಚಿತ ಪಠ್ಯ ಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ವಿತರಣೆ ಮಾಡದೇ ಇರುವುದು

ಶ್ರೀ ಎ. ರಾಮಸ್ವಾಮಿ.—ಸ್ವಾಮಿ, ರಾಜ್ಯದಲ್ಲಿ ೧೯೯೦–೯೧ನೇ ಸಾಲಿಗೆ ಉಚಿತ ಪಠ್ಯ ಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ವಿತರಣೆ ಮಾಡದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಆಗಿರತಕ್ಕ ತೊಂದರೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್(ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,